# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 791 (871) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎನ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 15-12-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸನ್ಮಾನ್ಯ ಮುಖ್ಯಮಂತ್ರಿಗಳ ಆದೇಶದ ವಿರುದ್ಧವಾಗಿ ಮಾನ್ಯ ಲೋಕಾಯುಕ್ತ ತನಿಖೆಯಲ್ಲಿ ಪ್ರಕರಣವೊಂದರಲ್ಲಿ ಅಪರಾಧ ಸಾಬೀತುಗೊಂಡಿರುವ ಮತ್ತು ಇಲಾಖೆ ವಿಚಾರಣೆ ಎದುರಿಸುತ್ತಿರುವ ಕಳಂಕಿತ ವೈದ್ಯರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿರುವ ಅಂಗಾಂಗ ನಿರ್ಧರಣಾ ಸಮಿತಿ (ORGAN SPECIFIC COMMITTEE) ಯ ಸದಸ್ಯರನ್ನಾಗಿ ಅಕ್ರಮವಾಗಿ ನೇಮಿಸಿರುವ ಮೂಲಕ ಅಂಗಾಂಗ ಮಾರಾಟ ದಂಧೆಗೆ ಅನುವು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, (ವಿವರ ನೀಡುವುದು)? | ಸರ್ಕಾರದ ಆದೇಶ ಸಂಖ್ಯೆ HFW 235 FPR 2025 ದಿನಾಂಕ 03-10-2025 ರ ಪ್ರಕಾರ, ಅಂಗಾಂಗ ಕಸಿಗೆ ಸಂಬಂಧಿಸಿದ ತಜ್ಞರ ಸಲಹೆ ಪಡೆಯಲು ಜೀವಸಾರ್ಥಕತೆ /SOTTO Karnataka ಅಡಿಯಲ್ಲಿ ಮೂರು ವರ್ಷದ ಅವಧಿಗೆ ಅಂಗಾಂಗ ನಿರ್ಧರಣಾ ಸಮಿತಿಯನ್ನು ಮರು ರಚಿಸಲಾಗಿದೆ. ಸಮಿತಿ ರಚಿಸುವ ಸಂದರ್ಭದಲ್ಲಿ ಎಲ್ಲಾ ಅನುಮೋದಿತ ಅಂಗಕಸಿ ಕೇಂದ್ರಗಳು ಮತ್ತು ತಜ್ಞ ವೈದ್ಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆ ಸಂದರ್ಭದಲ್ಲಿ ವಿಚಾರಣೆ ಅಥವಾ ತನಿಖೆ ಎದುರಿಸುತ್ತಿರುವ ವೈದ್ಯರ ಕುರಿತು ಇಲಾಖೆಗೆ ಯಾವುದೇ ಮಾಹಿತಿ ಲಭ್ಯವಾಗಿರಲಿಲ್ಲ. ಆರೋಪಿತ ವೈದ್ಯರನ್ನು ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ ನಿರ್ದೇಶಕರ ಶಿಫಾರಸ್ಸಿನಂತೆ ಸಮಿತಿಯಲ್ಲಿ ಸೇರಿಸಿಕೊಳ್ಳಲಾಗಿತ್ತು.<br><br>ನಂತರ ಸಂಬಂಧಿತ ಮಾಹಿತಿ ಇಲಾಖೆಗೆ ತಿಳಿದ ತಕ್ಷಣ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಲೋಕಾಯುಕ್ತ ತನಿಖೆ ಪ್ರಕ್ರಿಯೆ ಎದುರಿಸುತ್ತಿರುವ ವೈದ್ಯರ Organ Specific ಸಮಿತಿಯ ಸದಸ್ಯತ್ವವನ್ನು ಕೈಬಿಡುವ ಕ್ರಮ ಕೈಗೊಳ್ಳಲಾಗಿದೆ.<br><br>ಸರ್ಕಾರವು ಅಂಗಾಂಗ ಮಾರಾಟ, ಅಕ್ರಮ ಚಟುವಟಿಕೆಗಳು ಅಥವಾ ಯಾವುದೇ ರೀತಿಯ ದುರ್ಬಳಕೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲದೆ, ಜೀವಸಾರ್ಥಕತೆ/SOTTO Karnatakaದ ಎಲ್ಲಾ ಕಾರ್ಯಗಳು ಪಾರದರ್ಶಕ, ನಿಯಮಾನುಸಾರ ಹಾಗೂ ನ್ಯಾಯ ಸಮ್ಮತವಾಗಿ ನಡೆದಿರುತ್ತವೆ. |

ಸಂಖ್ಯೆ: ಆಕುಕ 124 ಎಸ್.ಟಿ.ಕ್ಯೂ. 2025.

( ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು